ಮೈಸೂರ ಗೆಜಿಟ.

ನಂ. 27 ಸರ್ಕಾರದಿಂದ ಘಾಯಿಷ್ ಆದ್ದು. ಸನ 1890.

ಬೆಂಗಳೂರು, ಶನಿವಾರ, ಜುಲೈ ತಾ|| 12, ಸನ 1890.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ ವರ್‌ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಶಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪ್ರೋಸ್ಕ್ಲಾಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ಮೊಕ್ಕಾಂ ಮೈಸೂರು ತಾರೀಖು 8ನೇ ಜುಲೈ 1890.

ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರಿಗೆ, 1890ನೇ ಇಸವಿ ಜುಲೈ 8ನೇ ತಾರೀಖ್ ಮಂಗಳವಾರದ ಪ್ರಾತಃಕಾಲ 8—30 ಘಂಟೆಯಲ್ಲಿ ಪುತ್ರೋತ್ಸವವಾದ ಶುಭ ಸಮಾಚಾರವನ್ನು ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲು ಶ್ರೀಮನ್ಮಹಾರಾಜಾ ಸರ್ಕಾರವವರು ಬಹಳವಾಗಿ ಸಂತೋಷಿಸುತ್ತಾರೆ. ಪರಮ ಶುಭಕರವಾದ ಈ ಸಂದರ್ಭದ ಗೌರವಾರ್ಥವಾಗಿ ಈ ಸಂಸ್ಥಾನದ ದರೋಬಸ್ತು ಕಚೇರಿಗಳಲ್ಲಿಯೂ ಮಾಹೆ ಮಜಕೂರು 19ನೇ ತಾರೀಖು ರಜಾದಿವಸದಂತೆ ಆಚರಿಸಲ್ಪಡತಕ್ಕದ್ದೆಂಬದಾಗಿ ಶ್ರೀಮನ್ಮಹಾರಾಜಾ ಸರ್ಕಾರದವರು ಆಜ್ಞಾಪಿಸುತ್ತಾರೆ.

ಹುಕುಂ ಬಮೋಜಿಬ್,
ಟಿ. ಆನಂದರಾವ್,
ಚೀಫ್ ಸೆಕ್ರಿಟರಿ.

ತಾರೀಖು 30ನೇ ಜೂನ್ 1890.

ನಂ. 92.–ಮೆಸ್ಟರ್ ತಂಬುಚೆಟ್ಟಿಯವರು ಬೇರೆ ಕೆಲಸದಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರಿಗೂ, ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಶಿಷನರ್ ಮೆಸ್ಟರ್ ಪಿ. ಯರ್. ಕೃಷ್ಣಮೂರ್ತಿ, ಬಿ. ಯಲ್. ಯವರು ಚೀಫ್ ಕೋರ್ಟಿನ

ಜಡ್ಜ ಕೆಲಸವನ್ನ ಆಕ್ಟಿಂಗ ತರೀಕ ನೋಡುವಂತೆ ಮೊಕರರ ಮಾಡಲ್ಪಟ್ಟಿರುವದಾಗಿ ಶ್ರೀಮನ ಮಹಾರಾಜ ರಾಜಾಸಾಹೆಬ ಬಹದ್ದೂರವರ ಅಪ್ಪಣೆ ಕೊಡಿಸಿರುತ್ತಾರೆ.

ಮೆಸ್ಟರ ತಂಬುಶೆಟ್ಟಿಯವರು ಚೀಫ ಕೋರ್ಟನ ಕೆಲಸ ಬಿಟ್ಟು ಬೇರೆ ಕೆಲಸದ ಮೇಲೆ ಯಿರುವ ಪರ್ಯಂತ ಚೀಫ ಕೋರ್ಟನ ಜಡ್ಜರಾದ ಮೆಸ್ಟರ ಎ. ರಾಮಚಂದ್ರ ಐಯ್ಯರ್‌ಯವರು, ಶ್ರೀಮನ ಮಹಾರಾಜರವರ ಕೌನ್ಸಲ್ಲಿನ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆಂಬದಾಗಿ ಶ್ರೀಮನ ಮಹಾರಾಜ ರಾಜಾಸಾಹೆಬ ಬಹದ್ದೂರವರು ಅಪ್ಪಣೆ ಕೊಡಿಸಿರುತ್ತಾರೆ.

ಶ್ರೀಮನ ಮಹಾರಾಜರವರ ಕೌನ್ಸಲ್ಲಿನ ನಡವಳಿತಕ್ಕಾಗಿ ಏರ್ಪಟ್ಟ ಸನ 1881ನೇ ಇಸವಿ ಜುಲೈ 8ನೇ ತಾರೀಖಿನಲ್ಲಿ ಮಂಜೂರಾದ ನಿಬಂಧನೆಗಳ 3ನೇ ಕಲಮಿಗೆ ಬದಲಾಗಿ ಇದರಡಿ ನಮೂದಾಗುವ ರೂಲನ್ನ ಕೇರಿಸತಕ್ಕದ್ದೆಂದು ಶ್ರೀಮನ ಮಹಾರಾಜ ರಾಜಾಸಾಹೆಬ ಬಹದ್ದೂರವರು ಅಪ್ಪಣೆ ಕೊಡಿಸಿರುತ್ತಾರೆ.

"3. ಯಕ್ಸ ಆಫಿಷಿಯೊ ಪ್ರೆಸಿಡೆಂಟರು, ಕೌನ್ಸಲ್ ಕೇರಿದ ಕಾಲದಲ್ಲಿ ಕೆಲಸ ನಡಿಯತಕ್ಕ ಕ್ರಮವನ್ನ ಠರಾವ ಮಾಡತಕ್ಕದ್ದು. ಯಕ್ಸ ಅಫಿಷಿಯೊ ಪ್ರೆಸಿಡೆಂಟರ ಮತ್ತು ತತ್ಕಾಲ ಚೀಫ ಜಡ್ಜರಾಗಿದ್ದ ಕೌನ್ಸಲ್ಲಿನ ಯಕ್ಸ ಅಫಿಷಿಯೋ ಮೆಂಬರಾಗ ಬಹುದಾದವರ ಗೈರ ಹಾಜರಿಯಲ್ಲಿ ಆಗ್ಯೆ ಹಾಜರಿರುವ ಸೀನಿಯರ ಮೆಂಬರೇ ಪ್ರೆಸಿಡೆಂಟ ತರೀಕ ಕೆಲಸ ನಡಿಸತಕ್ಕದ್ದು."

ಕೇ. ಶೇಷಾದ್ರಿ ಐಯ್ಯರ,
ದಿವಾನ.

ತಾರೀಖು 5ನೇ ಜೂನ 1890.

ನಂ. 85.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟ ಕುಣಿಗಲ ತಾಲ್ಲೂಕು ಬೈಕಿ ಯಿಡಿಯೂರಲ್ಲಿರುವ ಮುಸಾಫರ ಬಂಗ್ಲೆಯು, ಸನ 1890ನೇ ಇಸವಿ ಜುಲೈ ಗುರ್ರ ಲಾಗಾಯತು 2ನೇ ಕ್ಲಾಸಿನಿಂದ 3ನೇ ಕ್ಲಾಸಿಗೆ ದಾಖಲ್ಮಾಡಲ್ಪಟ್ಟಿರುತ್ತೆ.

ತಾರೀಖು 27ನೇ ಜೂನ 1890

ನಂ. 90.—ಮೆಸ್ಟರ ಅಂಣಾಜಿರಾಯರು, ಬೆಂಗಳೂರು ಡಿಸ್ಟ್ರಿಕ್ಟ ಫಾರೆಸ್ಟ ಆಫಿಸಿನ ಚಾರ್ಜನ್ನ ಅಸಿಸ್ಟೆಂಟ ಕನಸರವೇಟರ ಮೆಸ್ಟರ ಸಿ. ನಾರಾಯಣರಾಯರಿಗೆ 1890ನೇ ಇಸವಿ ಜೂನ 7ನೇ ತಾರೀಖಿನ ಪೂರ್ವಾನ್ಹದಲ್ಲಿ ಒಪ್ಪಿಸಿರುತ್ತಾರೆ.

ನಂ. 93.—ಸ್ಯಾನಿಟರಿ ಇಂಜನೀರ ಮೆಸ್ಟರ ಸ್ಟ್ಯಾಂಡಿಷ ಲೀ ಯವರು, ಮೈಸೂರು ಮ್ಯುನಿಸಿಪ್ಯಾಲಿಟಿಯ ವೈಸ ಪ್ರೆಸಿಡೆಂಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 2ನೇ ಜುಲೈ 1890.

ನಂ. 91.—ಶಿವಮೊಗ್ಗಾ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ ಮೆಸ್ಟರ ವಿ. ಪಿ. ಮಾಧವರಾವ ಬಿ. ಎ. ಯವರಿಗೆ, 1890ನೇ ಇಸವಿ ಜೂನ 9ನೇ ಮುಕ್ತಂ 64ನೇ ನಂಬರುಳ್ಳ ಇಸ್ತಿಹಾರಿನಲ್ಲಿ ಕೊಡೋಣಾಗಿದ್ದ ಪ್ರಿವಿಲೀಜ ರಜಾಕ್ಕೆ ಜಾಸ್ತಿಯಾಗಿ ಯಿನ್ನೂ ಯರಡು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

2. ಮೆಸ್ಟರ ಮಾಧವರಾಯರು, ರಜಾದಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರಿಗೂ ಅಸಿಸ್ಟೆಂಟ ಕಮ್ಮಿಷನರ ಮೆಸ್ಟರ ಯಸ. ಚಲುವಯ್ಯಂಗಾರ್ರು ಶಿವಮೊಗ್ಗಾ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ ವ ಡಿಸ್ಟ್ರಿಕ್ಟ ಮಾಜಿಸ್ಟ್ರೇಟ ಕೆಲಸವನ್ನ ಆಕ್ಟಿಂಗ ತರೀಕ ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತಾರೆ.

3. ಕೋಲಾರ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ ಮೆಸ್ಟರ ಅಬ್ದುಲ ರಹಿಮಾನಯವರು, ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ ವ ಡಿಸ್ಟ್ರಿಕ್ಟ ಮಾಜಿಸ್ಟ್ರೇಟರಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

4. ಮೆಸ್ಟರ ಸಿ. ಮಾದಯ್ಯನವರು, ಮತ್ತೊಂದು ಹುಕುಂ ಕೊಡುವ ವರಿಗೂ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ವ ಡಿಸ್ಟ್ರಿಕ್ಟ ಮಾಜಿಸ್ಟ್ರೇಟ ಕೆಲಸವನ್ನ ಆಕ್ಟಿಂಗ ತರೀಕ ಕೆಲಸ ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತಾರೆ.

5. ಹಾಸನ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ ಮೆಸ್ಟರ ಪಿ. ಎನ. ಪೂರ್ಣಯ್ಯ ಬಿ. ಯೆ. ಯವರು, ಹಾಲೀ ರಜಾದಮೇಲೆ ಯಿರುತ್ತಾರಷ್ಟೆ, ಯಿವರು ಕೂಡ್ಲೆ ಕೆಲಸದಮೇಲೆ ದಾಖಲಾಗಿ ಹಾಸನ ಡಿಸ್ಟ್ರಿಕ್ಟ ಚಾರ್ಜನ್ನ ಪುನಶ್ಚ ವಹಿಸತಕ್ಕದ್ದು.

ನಂ. 95.—ಮೆಸ್ಟರ ಕೇ. ಶೇಷಾದ್ರಿ ಐಯ್ಯರ ಸಿ. ಯಸ. ಐ. ಯವರು, ಮೈಸೂರು ಶೀಮೆಯ ದಿವಾನ ಆಫಿಸಿನ ಚಾರ್ಜನ್ನ ಸನ 1890ನೇ ಇಸವಿ ಜೂನ 30ನೇ ತಾರೀಖಿನ ಮಧ್ಯಾನ್ಹಾತ್ಪರ ಮೆಸ್ಟರ ಟಿ. ಆರ. ಎ. ತಂಬುಶೆಟ್ಟಿಯವರಿಗೆ ಒಪ್ಪಿಸಿರುತ್ತಾರೆ.

ನಂ. 96.—ಇದರಡಿ ನಮೂದಾಗುವ ಬಡ್ತೀ ವ ಮೊಕರರಾತಿಗಳನ್ನ ಮಂಜೂರ್ಮಾಡೋಣಾಗಿರುತ್ತದೆ.

ಬಡ್ತೀಗಳು.

1. ಮೆಸ್ಟರ ತಿರುನಾರಣಾಚಾರಿ ಬಿ. ಯೆ. ಬಿ. ಯಲ. 2ನೇ ಕ್ಲಾಸಿನಿಂದ 1ನೇ ಕ್ಲಾಸಿಗೆ ಬಡ್ತಿ.
2. ಮೆಸ್ಟರ ಪಿ. ಯಸ. ಲಿಂಗಲಾಚಾರಿ 2ನೇ ಕ್ಲಾಸಿನಿಂದ 1ನೇ ಕ್ಲಾಸಿಗೆ.

3. ಮೆಸ್ಟರ್ ಸಿ. ಬಿ. ಶೇಷಗಿರಿರಾವ್ (2ನೇ ಕ್ಲಾಸಿನಲ್ಲಿ ಆಕ್ಟಿಂಗ್) ನೋಡುತ್ತಿರುವ 2ನೇಕ್ಲಾಸ್ ಮುನಸಿಫರಾಗಿರತಕ್ಕದ್ದು.
4. ಮೆಸ್ಟರ್ ಟಿ. ಜೆ. ವ್ಯಾಂಡರಲೊರ್ಯ 3ನೇ ಕ್ಲಾಸಿನಿಂದ 2ನೇ ಕ್ಲಾಸಿಗೆ.
5. ಮೆಸ್ಟರ್ ಬಿ. ಶ್ರೀನಿವಾಸರಾವ್ 3ನೇ ಕ್ಲಾಸಿನಿಂದ 2ನೇ ಕ್ಲಾಸಿಗೆ.
6. ಮೆಸ್ಟರ್ ಬಿ. ವೆಂಕಟಾಚಾರ್ 3ನೇ ಕ್ಲಾಸಿನಿಂದ 2ನೇ ಕ್ಲಾಸಿಗೆ.

ಸದರೀ ಬಡ್ತೀಗಳು ಸ್ಯ 1890ನೇ ಇಸವಿ ಜುಲೈ ಗುರ್ರೆ ಲಾಗಾಯತು ಜಾರೀಲಿ ಬರತಕ್ಕದ್ದು.

ಮೊಕರರಾತಿಗಳು.

1. ಮೆಸರ್ ಬಿ. ರಾಮಸ್ವಾಮಯ್ಯಂಗಾರ್ರು 3ನೇ ಕ್ಲಾಸ್ ಮುನಸಿಫರಾಗಿರತಕ್ಕದ್ದು.
2. ಕಡೂರು ಡಿಸ್ಟ್ರಿಕ್ಟು ರೆವಿನ್ಯೂ ಶಿರಸ್ತೇದಾರ್ ಮೆಸ್ಟರ್ ಸಿ. ರಾಮರಾಯರು 3ನೇ ಕ್ಲಾಸ್ ಮುನಸಿಫರಾಗಿರತಕ್ಕದ್ದು.
3. ಅಡ್ವೊಕೇಟ್ ಮೆಸ್ಟರ್ ಎ. ಆನಂದರಾಯರು 3ನೇ ಕ್ಲಾಸ್ ಮುನಸಿಫರಾಗಿರತಕ್ಕದ್ದು.

ನಂ. 97.—ಯಿದರಡಿ ನಮೂದಾಗುವ ಮುನಸಿಫರುಗಳ ವರ್ಗಾವರ್ಗಿ ವ ನೇಮಣೂಕಿಗಳನ್ನು ಹುಕುಂ ಮಾಡೋಣಾಗಿರುತ್ತದೆ.

1. ಮೆಸ್ಟರ್ ಸಿ. ರಾಮರಾಯರು, ಯಡೆಹಳ್ಳಿ ಮುನಸಿಫರಾಗಿರತಕ್ಕದ್ದು.
2. ಮೆಸ್ಟರ್ ಬಿ. ವೆಂಕಟಾಚಾರ್ ಯಡೆಹಳ್ಳಿಯಿಂದ ನಂಜನಗೂಡಿಗೆ ವರ್ಗ.
3. ಮೆಸ್ಟರ್ ಸಿ. ಶಿಂಗ್ಲಾಚಾರ್ರಿಗೆ ನಂಜನಗೂಡಿನಿಂದ ಬೆಂಗಳೂರಿಗೆ ವರ್ಗ.
4. ಮೆಸ್ಟರ್ ಬಿ. ರಾಮಸ್ವಾಮಯ್ಯಂಗಾರ್ರು ಬೆಂಗಳೂರಿನ ಅಡಿಷನಲ್ ಮುನಸಿಫರಾಗಿರತಕ್ಕದ್ದು.
5. ಮೆಸ್ಟರ್ ಎ. ಆನಂದರಾಯರು ನೆಲವಂಗಲದ ಮುನಸಿಫರಾಗಿರತಕ್ಕದ್ದು.
6. ಮೆಸ್ಟರ್ ಪಿ. ವೆಂಕಟರಾಯರು ನೆಲವಂಗಲದಿಂದ ಚಿಕ್ಕಮುಗಳೂರಿಗೆ ವರ್ಗ.
7. ಮೆಸ್ಟರ್ ಟಿ. ಜೆ. ವ್ಯಾಂಡರಲೊರ್ಯ ಯವರು ಚಿಕ್ಕಮುಗಳೂರಿನಿಂದ ಹಾಸನಕ್ಕೆ ವರ್ಗ.
8. ಮೆಸ್ಟರ್ ಯು. ಮಂಗಪತಿನಾಯಡು ಯವರಿಗೆ ಹಾಸನದಿಂದ ಚಿತ್ರದುರ್ಗಕ್ಕೆ ವರ್ಗ.
9. ಮೆಸ್ಟರ್ ತಿರುನಾರಣಾಚಾರಿ ಬಿ. ಎ. ಬಿ. ಯಲ್. ಚಿತ್ರದುರ್ಗದಿಂದ ಶಿವಮೊಗ್ಗೆಗೆ ವರ್ಗ.
10. ಮೆಸ್ಟರ್ ಸಿ. ಬಿ. ಶೇಷಗಿರಿರಾವ್ ಶಿವಮೊಗ್ಗೆಯಿಂದ ಶ್ರೀರಂಗಪಟ್ಟಣಕ್ಕೆ ವರ್ಗ.

ತಾರೀಖು 3ನೇ ಜುಲೈ 1890.

ನಂ. 94.—ಅಂಜೇಬಿಹ್ಸಿ ಮೆಸ್ಟರ್ ಮರಿಗಂಗಯ್ಯನವರಿಗೆ, 1890ನೇ ಇಸವಿ ಜುಲೈ ಗುರ್ರೆ ಲಾಗಾಯತು ಒಂದು ತಿಂಗಳ್ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 19ನೇ ಜೂನ್ 1890.

ನಂ. 79.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆಯಾವದೂ ಇಲ್ಲದೆ ಗ್ರಾಮವು ಚೆಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಹೆಪ್ಯೂಟಿ ಕಮ್ಶಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತೀ ಮಾಡದಿದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರಾಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರಾಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೇ ಸೆಕ್ಷನ್ ಅನುಸಾರವಾಗಿ ಜಮೀನಿ ಕೊಟ್ಟಾಗ್ಯೂ ಹರಾಜ್ ಮುಲ್ತವಿ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳತಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಅಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಜಿಲ್ಲೆ	ತಾಲ್ಲೂಕು.	ಹೋಬಳಿ.	ಗ್ರಾಮ	ಜೋಡಿ ವ ಕಾಯಂ ಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾಸರ್ಕಾರದ ಕಂದಾಯದ ಬಾಕಿ.	ಹರಾಜ್ ತಾರೀಖು ವಗೈರೆ.
					ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ. ×	ರೂ. ಆ. ಪೈ.	
ಕೋಲಾರ	ಬೆಂಗಳೂರ	ಸೂರ್ಯಸಾಗರ	ಬಿಲವ ನಾಗೇನ ಹಳ್ಳಿ ಜೋಡೀ ಗ್ರಾಮ	ಸುಬ್ಬರಾಯಪ್ಪ ವಗೈರೇರು	5 14 4	17 10 2	9 1 8		× ಲೋಕಲ್‌ಸೆಸ್ ದೇಖೀಲ್
						1876—77	ನೇ ಇಸವಿ ಬಗೆ	1 7 11	ಸ್ಯ 1890ನೇ ಇಸವಿ ಆಗಸ್ಟ್ ತಾರೀಖು 4ನೇ ತಾಲ್ಲೂಕಾ ಕಛೇರಿ ಬಳಿ ಅಮಲ್‌ದಾರ್ ರವರೂ
						1877—78	ಡಿಟೋ	1 7 11	
						1878—79	ಡಿಟೋ	4 7 9	
						1879—80	ಡಿಟೋ	1 11 0	
						1880—81	ಡಿಟೋ	4 12 0	
						1881—82	ಡಿಟೋ	4 2 3	
						1883—84	ಡಿಟೋ	1 9 8	
						1884—85	ಡಿಟೋ	4 12 0	
						1885—86	ಡಿಟೋ	4 12 0	
						1886—87	ಡಿಟೋ	20 9 4	
						1887—88	ಡಿಟೋ	25 0 0	
						1888—89	ಡಿಟೋ	25 0 0	
						1889—90	ಡಿಟೋ	25 0 0	
							ಲೋಕಲ್‌ಸೆಸ್	28 8 9	
							ನೋಟಿಸ್ ಫೀ	1 0 0	
							ಜುಮ್ಲಾ	154 4 7	
							ವ ಹರಾಜು ತಾರೀಖಿನ ವರಿಗೆ ಬಡ್ಡಿ ಸಹಾ		
	ಡಿಟೋ	ನಂದೀ	ಜೊಕ್ಕಲಬಲೆ ಜೋಡಿ ಗ್ರಾಮ	ಸುಬ್ಬಣ್ಣಾಚಾರಿ, ಕೆ. ರಾಮಾಶಾಸ್ತ್ರಿ ವಗೈರೇರು	ಯ. ಗುಂ. 529 3 2	395 0 0	× 167 11 0		× ಲೋಕಲ್‌ಸೆಸ್ ದೇಖೀಲ್
						1877—78	ನೇ ಇಸವಿ ಬಗೆ	6 4 11	ಸ್ಯ 1890ನೇ ಇಸವಿ ಆಗಸ್ಟ್ ತಾರೀಖು 4ನೇ ತಾಲ್ಲೂಕಾ ಕಛೇರಿ ಬಳಿ ಅಮಲ್‌ದಾರ್ ರವರೂ
						1878—79	ಡಿಟೋ	30 12 6	
						1879—80	ಡಿಟೋ	21 11 1	
						1880—81	ಡಿಟೋ	12 2 2	
						1881—82	ಡಿಟೋ	17 5 9	
						1882—83	ಡಿಟೋ	24 6 3	
						1883—84	ಡಿಟೋ	24 13 8	
						1884—85	ಡಿಟೋ	24 13 7	
						1885—86	ಡಿಟೋ	21 9 4	
						1886—87	ಡಿಟೋ	80 2 10	
						1887—88	ಡಿಟೋ	87 9 5	
						1888—89	ಡಿಟೋ	101 0 10	
						1889—90	ಡಿಟೋ	101 15 2	
							ಬಾಂದ್‌ಲಾಗವಡು	2 0 1	
							ನೋಟಿಸ್ ಫೀ	1 0 0	
							ಜುಮ್ಲಾ	557 11 7	
							ವ ಹರಾಜು ತಾರೀಖಿನ ವರಿಗೆ ಬಡ್ಡಿ ಸಹಾ		

ಷರಾ.—ಜೋಡ್ರೀದಾರರುಗಳೆಂದಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರೆಂದಾಗಲಿ ವ್ಯಂಟುಮಾಡಲ್ಪಟ್ಟಿತ ಮಾಂ.ಹಿಜುವಳಿಗಳಿಗೂ ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ಒಳಪಟ್ಟಿರುವದಿಲ್ಲ.

ತಾರೀಖು 4ನೇ ಜುಲೈ 1890.

ನಂ. 99.—ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಜೆ. ಜಿ. ನಾರ್ತ್ ಯವರಿಗೆ, 1890ನೇ ಮಾರ್ಚ 26ರ ಲಾಗಾಯತು ಜಾರೀನಿಸಿ ಸನ್ 1890ನೇ ಇಸವಿ ಏಪ್ರೆಲ್ 17ನೇ ಮರ್ತ್ತುಮಿನ ಕ್ಯಾಂಪ್ 91ನೇ ನಂಬರುಳ್ಳ ಗವರ್ನಮೆಂಟ್ ಇಸ್ತಿಹಾರಿನಲ್ಲಿ ಕೊಡೋಣಾಗಿದ್ದ ಯರಡುತಿಂಗಳ ಫರ್‌ಲೊ ರಜಾಕ್ಕೆ ಜಾಸ್ತಿಯಾಗಿ ಯಿನ್ನೂ ಯರಡು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 98.—ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ಬಿ. ತಿರುಮಲಾಚಾರ್ ಬಿ. ಯಲ್. ಯವರು, 1890ನೇ ಇಸವಿ ಜೂನ್ 27ನೇ ತಾರೀಖಿನ ಮಧ್ಯಾನ್ಹಾತ್ಪರ ಚಿತ್ರದುರ್ಗ ಡಿಸ್ಟ್ರಿಕ್ಟಿನ ಚಾರ್ಜನ್ನು ವಹಿಸಿರುತ್ತಾರೆ.

ನಂ. 100.—ಅಸಿಸ್ಟೆಂಟ್ ಮಿಲಿಟರಿ ಸೆಕರಟರಿ ಮೆಸ್ಟರ್ ದೇಶರಾಜ ಅರಸಿನವರು, ಸನ್ 1889ನೇ ಇಸವಿ ಡಿಸೆಂಬರ್ 29ನೇ ತಾರೀಖಿನಲ್ಲಿ ಪುನಃ ಕೆಲಸದಮೇಲೆ ಬಂದಿರುತ್ತಾರಾಗಿ, 1890ನೇ ಇಸವಿ ಫಿಬ್ರವರಿ 26ನೇ ಮರ್ತ್ತುಂ 915ನೇ ನಂಬರುಳ್ಳ ಇಸ್ತಿಹಾರಿನಲ್ಲಿ ಮಂಜೂರ್ಮಾಡೋಣಾಗಿರುವ ರಜಾ ವೈಕಿ ಉಪಯೋಗಿಸಿಕೊಳ್ಳದೇ ಪುಳದಿರುವ (3 ದಿವಸಗಳ) ರಜಾವನ್ನು ಇದರ ದೆಸೆಯಿಂದ ರದ್ದುಪಡಿಸೋಣಾಗಿರುತ್ತದೆ.

ರೂಲ್.

ಮೈಸೂರು ಗೆಜೆಟ್ಟಿಗೆ ಚಂದಾ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಹಾಲಿ ಜಾರೀಯಿರುವ ನಡವಳಿತವನ್ನು ರದ್ದು ಮಾಡಿ ಇದರಡಿ ಬರುವ ನಿಬಂಧನೆಯನ್ನು ವಿಧಿಸೋಣಾಗಿರುತ್ತೆ.

ಯಿಚ್ಛೈವುಳ್ಳ ಚಂದಾದಾರರು, ಅವರ ಚಂದಾ ಮೊಬಲಗನ್ನು ಅತ್ಯಂತ ಸಮೀಪವಾದ ತಾಲ್ಲೂಕು ಖಜಾನೆಗೆ ಪಾವತಿ ಮಾಡಬೇಕು.

ಅಮಲ್‌ದಾರರು ಹಾಂಗೆ ಪಾವತಿ ಮಾಡೋಣಾದ ಮೊಬಲಗಿಗೆ, ಟ್ರೈಜರಿಗೆ ಬಂದ ಮೊಬಲಗಿಗಾಗಿ ಕೊಡುವ ವಾಡಿಕೆಯಾದ ಅಚ್ಚಿನ ನಮೂನೆಯಲ್ಲಿ ದ್ವಿಪ್ರತಿ ರೇತಿಯನ್ನು ತಯಾರ್ಮಾಡಿ ಕೊಡತಕ್ಕದ್ದು.

ಚಂದಾದಾರನು ಡ್ಯೂಪ್ಲಿಕೇಟ್ ರೇತಿಯನ್ನು ತನ್ನಲ್ಲಿ ಯಿಟ್ಟುಕೊಂಡು, ಒರಿಜಿನಲ್ ರೇತಿಯನ್ನು ತನ್ನ ದರಖಾಸ್ತಿನ ಸಂಗಡ ಮೈಸೂರು ಗೆಜೆಟ್ ಕಂಪೈಲರವರಿಗೆ ಕಳುಹಿಸತಕ್ಕದ್ದು.

ಕಂಪೈಲರವರು ಟ್ರೈಜರಿ ರೇತಿಯನ್ನು ಹಣಬಂದಂತೆ ಒಪ್ಪಿಕೊಳ್ಳುವರು.

ತಾರೀಖು 21ನೇ ಡಿಸೆಂಬರ್ 1888.

ಕಾರ್ಯಾರ್ಥ ದಿವಾನರವರನ್ನು ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಿಟರಿಯವರಿಗೆ ತಮ್ಮ ಕಾರ್ಡುಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿಸಿನಲ್ಲಿ ಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಿಟರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಿಟರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವವು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಹುಕುಂ ಬಮೋಜೀಬ್,

ಟಿ. ಆನಂದರಾವ್,
ಚೀಫ್ ಸೆಕ್ರಿಟರಿ.